ಈ ಅಳತೆ ಗೋಲಿನ ವ್ಯಾಪ್ತಿಗೆ ಬಾರದಿರುವ ಗ್ರಾಮ: ಹ್ಯಾಮ್ಲೆಟ್‌ಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತನೆ ಮಾಡಿರುವುದಿಲ್ಲ.

ಆ. ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಇ. ಈಗಿರುವ ಮಾನದಂಡವನ್ನು: ಅಳತೆಗೋಲನ್ನು ಸಡಿಲಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಆದಾದ ನಂತರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಬೀದರ್ ಜಿಲ್ಲೆಯಲ್ಲಿ ಹೊಸ ಸೇತುವೆಗಳ ನಿರ್ಮಾಣ

899 (1530) - ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೀದರ್ ಜಿಲ್ಲೆಯಲ್ಲಿ ಈ ಸಾಲಿನಲ್ಲಿ ಎಷ್ಟು ಹೊಸ ಸೇತುವೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ;

ಆ. ಈ ಸೇತುವೆಗಳ ಪೈಕಿ ಯಾವ ಯಾವ ಸೇತುವೆಗಳು ಅಂತರ ರಾಜ್ಯಗಳಲ್ಲಿ ಸಂಪರ್ಕವನ್ನು ಕಲ್ಪಿಸುತ್ತವೆ;

ಇ. ಇದಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಈ ಹಣಕಾಸು ವರ್ಷದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ರಾಜ್ಯ ಸಚಿವರು) :

ಅ. ಬೀದರ್ ಜಿಲ್ಲೆಯಲ್ಲಿ 2002-03ರಲ್ಲಿ ಯಾವುದೇ ಹೊಸ ಸೇತುವೆ ನಿರ್ಮಾಣದ ಬಗ್ಗೆ ಗುರಿ ಹಾಕಿಕೊಂಡಿರುವುದಿಲ್ಲ.

ಆ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭಟ್ಕಳ ಕ್ಷೇತ್ರದ ಮುಜರಾಯಿ ಇಲಾಖೆಯ ದೇವಸ್ಥಾನಗಳು

900 (1123) - ಶ್ರೀ ನಾಯಕ್ ಜೆ.ಡಿ. (ಭಟ್ಕಳ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮುಜರಾಯಿ ಇಲಾಖೆ ಅಡಿಯಲ್ಲಿ ಬರತಕ್ಕ ದೇವಸ್ಥಾನಗಳ ವಿವರಗಳನ್ನು ಒದಗಿಸುವುದು?

2. ಮುಜರಾಯಿ ಇಲಾಖೆಯ ನಿಯಮಗಳಂತೆ ದೇವಸ್ಥಾನಗಳಿಗೆ ಯಾವಾಗ ಸಮಿತಿಗಳನ್ನು ರಚಿಸಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ವಿಧಾನ ಸಭಾ ಕ್ಷೇತ್ರದಲ್ಲಿ ಬಿ.ಪಿ.ಟಿ. ಕಾಯ್ದೆ 1950 ರಡಿ 76 ದೇವಾಲಯಗಳು ನೊಂದಣಿಯಾಗಿದ್ದು ಪಟ್ಟಿ ಲಗತ್ತಿಸಿದೆ.

2. ಬೆಳಗಾಂ ವಿಭಾಗದಲ್ಲಿ ಬಿ.ಪಿ.ಟಿ. ಕಾಯ್ದೆ 1950 ಜಾರಿಯಲ್ಲಿರುವುದರಿಂದ ಈ ಕಾಯ್ದೆ ಅಡಿ ನೊಂದಾಯಿಸಲ್ಪಟ್ಟ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಅವುಗಳ ಸಮಿತಿಯನ್ನು ತಾವೇ ರಚಿಸುವ ಅಧಿಕಾರ ಹೊಂದಿರುವುದರಿಂದ ಸರ್ಕಾರದ ಹಂತದಲ್ಲಿ ಸಮಿತಿ ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಅ.ನಂ.	ನೊಂದಣಿ ನಂಬರು	ದೇವಸ್ಥಾನ ಹೆಸರು ಮತ್ತು ಗ್ರಾಮ
1.	ಎ-85 (ಕಾರವಾರ)	ಮಾರ್ತಂಡೇಶ ದೇವ ಬೈಲೂರು
2.	ಎ-214	ದುರ್ಗಾದೇವಿ ಬಿಳಕಿ
3.	ಎ-215	ಭಾಗ್ಯವತೆ ದುರ್ಗಾದೇವಿ ಮೂರಕೇರಿ
4.	ಎ-216	ಶಂಭುಲಿಂಗ ದೇವ "
5.	ಎ-217	ನಾರಾಯಣ ದೇವ "
6.	ಎ-218	ವಿಶ್ವ ಮಾರ್ತಂಡದೇವ ಕಿತರ್
7.	ಎ-219	ಕಾಳಿಂಗ ಮರ್ಧನ "
8.	ಎ-222	ವಿನಾಯಕ ದೇವ ಕೊಟ್ಟ
9.	ಎ-223	ಶಿವಲಿಂಗದೇವ ಕಡ್ಲೆ
10.	ಎ-224	ದುರ್ಗಾಪರಮೇಶ್ವರಿ ದೇವಿ ಬೆಂಗರ್
11.	ಎ-225	ಗಣಪತಿದೇವ ಕೊಪ್ಪ
12.	ಎ-245	ದುರ್ಗಾದೇವಿ ಶ್ರೀ ಹನುಮಂತದೇವ ಶಿರಾಲಿ
13.	ಎ-246	ವಿನಾಯಕದೇವ ಬೆಳಕೆ
14.	ಎ-347	ಗೋಪಾಲಕೃಷ್ಣ ಲಕ್ಷಿ ನಾರಾಯಣ ದೇವ ಕುಸಗಡೆ
15.	ಎ-248	ಹನುಮಂತದೇವ ಗಾವಿಗಾ
16.	ಎ-250	ವಿಷ್ಣುಮೂರ್ತಿದೇವ ಕುಂತವಾಣೆ
17.	ಎ-251	ಶಂಭುಲಿಂಗ ದೇವ ಮಠ ಭಟ್ಕಳ
18.	ಎ-252	ಗೋಪಾಲಕೃಷ್ಣ ದೇವ "
19.	ಎ-253	ತಿರುಮಲ ವೆಂಕಟರಮಣ ದೇವ ಭಟ್ಕಳ
19.	ಎ-254	ಚಿನ್ನಪಟ್ಟಣದೇವ ಕುಸುಗಡೆ
20.	ಎ-256	ಬಾಗದ್-ನರಸಿಂಹದೇವ ಶಿರಾಲಿ
21.	ಎ-255	ಕಂಚಿನ ದುರ್ಗಾದೇವಿ ಶಿರಾಲಿ
22.	ಎ-257	ಹಳೇಕೋಟೆ ಹನುಮಂತದೇವ ಶಿರಾಲಿ
23.	ಎ-258	ಮಂಟೋಡ ಕೇಶವ ನಾರಾಯಣ ದೇವ ಶಿರಾಲಿ
24.	ಎ-259	ಪಡಿನಾಥ ಗೋಪಿನಾಥ ದೇವ ಭಟ್ಕಳ
25.	ಎ-260	ಲಕ್ಷಿ ನಾರಾಯಣ ರಾಮನಾಥ ದೇವ ಕುಸುಗಡೆ
26.	ಎ-261	ಪ್ರಾಕರ ವಿನಾಯರ ದೇವ ಕುಸುಗಡೆ
27.	ಎ-262	ಚೋಳೇಶ್ವರ ದೇವ ಭಟ್ಕಳ
28.	ಎ-263	ಭಟ್ಟೆ ವಿನಾಯಕ ದೇವ ಸುಸಗಡಿ
29.	ಎ-264	ಕೋತಿವೈ ನಾರಾಯಣ ದೇವ "
30.	ಎ-265	ಕಾಶಿಮರಡಿ ಹನುಮಂತ ದೇವ "
31.	ಎ-266	ವಿರಮಾಸ್ತಿದೇವ ಬೈಲೂರು

1	2	3
32.	ಎ-267	ವಿಷ್ಣುಮೂರ್ತಿದೇವ ಬೈನೂರು
33.	ಎ-272	ಬಳಸೆ ಬಸ್ತಿ ಮಾಲಿ
34.	ಎ-273	ಪಾರ್ಶನಾಥ ದೇವ ಅರಹೊಳೆ
35.	ಎ-274	ಹೊನ್ನಮಾಹಸತಿ ದೇವ ಕಾಯ್ಕಿಣಿ
36.	ಎ-276	ಪರಮವಲ್ಲಿ ಶಂಬುಲಿಂಗ ದೇವ ಶಿರಾಲಿ
37.	ಎ-296	ನರಸಿಂಹ ದೇವ ಮುಂಡವಲ್ಲಿ
38.	ಎ-297	ನಾರಾಯಣ ದೇವ
39.	ಎ-298	ಲಕ್ಷ್ಮಿ ನಾರಾಯಣ ದೇವ ”
40.	ಎ-309	ಶಂಕರಲಿಂಗದೇವ ಹಡಲಿ
41.	ಎ-320	ಮಾತೋಟಾರ ಮುರಡೇಶ್ವರ ದೇವ ಮುರಡೇಶ್ವರ
42.	ಎ-321	ಶ್ರೀ ದುರ್ಗಾದೇವಿ ನರಸಿಂಹ ದೇವ ಬ್ರಹ್ಮದೇವ ಮುಂಡೋಳ್ಳಿ
43.	ಎ-347	ಚಿತ್ರಾಪೂರ ಮಡ ಶಿರಾಲಿ
44.	ಎ-351	ಬೆಂದೂರು ದುರ್ಗಾಪರಮೇಶ್ವರಿ ಚಿತ್ರೆ
45.	ಎ-378	ಮಾಣಿಕಮಾ ಚಂದ್ರ ದೇವ ಮುತ್ತಲಿ
46.	ಎ-379	ವೆಂಕಟರಮಣದೇವ ಸುಸಗಡಿ ”
47.	ಎ-386	ರಾಮಲಿಂಗ ಮತ್ತು ವೀರಭದ್ರದೇವ ಕಳಸ
48.	ಎ-252 (ಕಾರವಾರ)	ಗೋಪಾಬಕೃಷ್ಣದೇವ ಭಟ್ಕಳ
49.	ಎ-410	ಗುರುನಾಥೇಶ್ವರ ದೇವ ಶಿರಾಳಿ
50.	ಎ-411	ಚಿದಾನಂದೇಶ್ವರ ದೇವ ದುಗ ಗೋಪಾಲಕೃಷ್ಣ ಕಾನಮ್ಮ ದೇವಿ ಬೈಲೂರು
51.	ಎ-413	ಚಂದ್ರನಾಥೇಶ್ವರ ದೇವ ಬಸ್ತಿ ಆಡವಲ್ಲಿ
52.	ಎ-416	ದತ್ತೆತೆಶ್ವರ ದೇವಸ್ಥಾನ ಶಿರಾಲಿ
53.	ಎ-419	ದುರ್ಗಾಪರಮೇಶ್ವರಿ ದೇವಿ ಶಿರಾಲಿ
54.	ಎ-426	ಕರಿಕಾದುರ್ಗಾಪರಮೇಶ್ವರಿ ದೇವ ಕಾಯ್ಕಿಣಿ
55.	ಎ-429	ವೆಂಕಟರಮಣದೇವಮುರಡೇಶ್ವರ
56.	ಎ-431	ಮುರೇಶ್ವರ ದೇವ ಕಾಯ್ಕಿಣಿ
57.	ಎ-437	ದುರ್ಗಾಪರಮೇಶ್ವರಿ ದೇವ ಜಂಗರ
58.	ಎ-438	ಶಂಬುಲಿಂಗದೇವ ಶಿರಾಲಿ
59.	ಎ-439	ಜತ್ತಜಟ್ಟಿಮಠ ಶಿರಾಲಿ
60.	ಎ-440	ಬೆಳೆನರಸಿಂಹದೇವ ಶಿರಾಲಿ
61.	ಎ-481	ಚೆನ್ನಕೇಶವ ದೇವ ನಾರಾಯಣದೇವ ಶಿರಾಲಿ
62.	ಎ-484	
63.	ಎ-530	ವೀರವಿಠಲದೇವ ಸುಸಗಡಿ

1	2	3
64.	ಎ-531	ರಂಗನಾಥ ದೇವ "
65.	ಎ-575	ಲಕ್ಷ್ಮಿ ನಾರಾಯಣದೇವ ಬೈಲೂರು
66.	ಎ-620	ವಿಷ್ಣುಮೂರ್ತಿ, ಗಣಪತಿ ಜೀರ್ಣೋದ್ಧಾರ ಕಮೀಟಿ ಕೋಟಖಿಂಡ
67.	ಎ-621	ಕೇಶವನಾರಾಯಣ ದೇವಮುರಕೇರಿ ಪೇಟೆ
68.	ಎ-638	ದುರ್ಗಾಪರಮೇಶ್ವರಿ ದೇವ ಅಳವಕೋಡ
69.	ಎ-677	ವಿಷ್ಣುಮೂರ್ತಿ ಮತ್ತು ಗಣಪತಿ ದೇವ ಕೋಟಕೊಂಡ
70.	ಎ-681	ನಾರಾಯಣದೇವ ಮುರರ್ಂ
71.	ಎ-685 (ಕಾರವಾರ)	ದುರ್ಗಾಪರಮೇಶ್ವರಿ ದೇವ ಅಳವೆಕೊಡಿ
72.	ಎ-711	ಮಹಾಕಾಳೀದೇವಿ ಕಾಯ್ಕಿಣಿ
73.	ಎ-715	ಮಹಾಪತಿ ದೇವ ಸೂಡಿಗಟ್ಟ
74.	ಎ-734	ದತ್ತ ಉಮಾಮಹೇಶ್ವರಿ ದೇವ ನಾಡಗರ
75.	ಎ-741	ಶ್ರೀ ಸದ್ಗುರು ಸದಾನಂದ ರಾಮಚಂದ್ರ ಮಹಾರಾಜ ವಿಶ್ವಸ್ಥ ಸದ್ಭಕ್ರಮಂಡಳಿ ಭಟ್ಕಳ
76.	ಎ-840	ಶ್ರೀ ಬೆಲ್ ಮಾಸ್ತಿ ದೇವಸ್ಥಾನ ಜೀರ್ಣೋದ್ಧಾರ ಕಮಿಟಿ ಬೈಲೂರು ಬೆಲೆಗದ್ದೆ

ಬೇಗೂರು ಗ್ರಾಮದ ಬೈಪಾಸ್ ನಿರ್ಮಾಣ

902 (1014) - ಶ್ರೀ ನಾರಾಯಣಸ್ವಾಮಿ ಎ (ಆನೇಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆನೇಕಲ್ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಬೇಗೂರು ಹೋಬಳಿ ಬೇಗೂರು ಗ್ರಾಮದಲ್ಲಿ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಯೋಜನೆ ತಯಾರಾಗಿರುವ ವಿಷಯ ನಿಜವೇ;

ಆ. ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ. ಸದರಿ ಕಾಮಗಾರಿಯನ್ನು ಎಷ್ಟು ದಿನಗಳಲ್ಲಿ ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಆನೇಕಲ್ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಬೇಗೂರು ಹೋಬಳಿ ಬೇಗೂರು ಗ್ರಾಮದಲ್ಲಿ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಯಾವುದೇ ಯೋಜನೆಯು ಸದ್ಯಕ್ಕೆ ಇರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ನಬಾರ್ಡ್ ಯೋಜನೆಯಡಿ ಕೈಗೆತ್ತಿಕೊಂಡು ನಿರ್ವಹಿಸುವ ರಸ್ತೆ ಕಾಮಗಾರಿಗಳ ವಿವರ

903 (1016) - ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?